**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

**ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033**

ಸಂಖ್ಯೆ:DPUE-ACA0OTH/325/2025 (e-1916530) ದಿನಾಂಕ: 28-09-2025

**ಸುತ್ತೋಲೆ**

ವಿಷಯ :- ಪದವಿ ಪೂರ್ವ ಶಿಕ್ಷಣ ಹಂತದ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಯ ಎಲ್ಲಾ ವಿಷಯಗಳ ಪಠ್ಯವನ್ನು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸುವ ಕುರಿತು.

ಉಲ್ಲೇಖ: ಶೈಕ್ಷಣಿಕ ವೇಳಾಪಟ್ಟಿ2025-26

*******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಜ್ಯದ ಎಲ್ಲಾ ಸರ್ಕಾರಿ / ಖಾಸಗಿ ಅನುದಾನಿತ / ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಫಲಿತಾಂಶವನ್ನು ಹೆಚ್ಚಿಸುವ ಸಂಬಂಧ ಈ ಕೆಳಕಂಡ ಕ್ರಮಗಳನ್ನು ಅನುಸರಿಸಲು ತಿಳಿಸಿದೆ.

1. ಎಲ್ಲಾ ಬೋಧನಾ ವಿಷಯಗಳ ಉಪನ್ಯಾಸಕರು ತಮ್ಮ ವಿಷಯದ ಪಠ್ಯವನ್ನು ಕ್ರಮಬದ್ಧ ಏರಿಕೆ ಕ್ರಮದಲ್ಲಿ ದಿನಾಂಕ:31.12.2025ರೊಳಗೆ ಪೂರ್ಣಗೊಳಿಸುವುದು.
2. ಪ್ರಾಂಶುಪಾಲರು ಎಲ್ಲಾ ವಿದ್ಯಾರ್ಥಿಗಳನ್ನು ಪ್ರತಿದಿನ ತರಗತಿಗೆ ಹಾಜರಾಗುವಂತೆ ಮತ್ತು ಹಾಜರಾದ ವಿದ್ಯಾರ್ಥಿಗಳ ಹಾಜರಾತಿಯನ್ನು SATS Portal ನಲ್ಲಿ ದಾಖಲಿಸುವುದು.
3. ಇಲಾಖಾ ಜಾಲತಾಣದಲ್ಲಿ ನೀಡಿರುವ ವಿಷಯವಾರು ಪ್ರಶ್ನೆಕೋಠಿಗಳ ಬಗ್ಗೆ ತಿಳಿಸಿ ಸದ್ಬಳಕೆ ಮಾಡಿಕೊಳ್ಳುವುದು.

ಮುಂದುವರೆದು, ಕ್ರಮಾನುಗತ ಪಾಠಗಳ ಬೋಧನೆಯಾಗಿದ್ದರೆ ವಿದ್ಯಾರ್ಥಿಗಳ ಕಲಿಕೆಗೆ ಹಾಗೂ ಅನುಪಾಲನೆಗೆ ಸೂಕ್ತವಾಗುತ್ತದೆ ಎಂದು ಭಾವಿಸಿ ಈಗಾಗಲೇ ಬೋಧನೆಯಾಗಿರುವ ಪಾಠಗಳನ್ನು ಹೊರತುಪಡಿಸಿ ಇನ್ನುಳಿದ ಪಾಠಗಳನ್ನು

ಪಠ್ಯಪುಸ್ತಕದಲ್ಲಿರುವಂತೆ ಅನುಕ್ರಮವಾಗಿ ನಡೆಸುವಂತೆ ತಮ್ಮ ಜಿಲ್ಲೆಯ ಎಲ್ಲಾ ಸರ್ಕಾರಿ / ಖಾಸಗಿ ಅನುದಾನಿತ / ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ತಿಳಿಸುವಂತೆ ಮತ್ತು ಪಠ್ಯವಸ್ತುವನ್ನು ಡಿಸೆಂಬರ್ ಅಂತ್ಯದೊಳಗೆ ಪೂರೈಸಿ ವಿದ್ಯಾರ್ಥಿಗಳನ್ನು ವಾರ್ಷಿಕ ಪರೀಕ್ಷೆಗೆ ಸಿದ್ಧಪಡಿಸಲು ಸೂಚಿಸಿದೆ

Digitally signed by
BHARATH
Date: 28-09-2025
15:01:35

ನಿರ್ದೇಶಕರು,

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

**ಗೆ,**

ರಾಜ್ಯದ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರಿಗೆ ಸೂಕ್ತ ಕ್ರಮ ವಹಿಸಲು ಸೂಚಿಸಿದೆ.

**ಪ್ರತಿಗಳು:-**

1. ಮಾನ್ಯ ನಿರ್ದೇಶಕರ ಅಪ್ತ ಶಾಖೆಗೆ -ಮಾಹಿತಿಗಾಗಿ.
2. ಸಹಾಯಕ ನಿರ್ದೇಶಕರು, ಇ-ಆಡಳಿತ, ಇಲಾಖಾ ಜಾಲತಾಣದಲ್ಲಿ ಅಳವಡಿಸಲು.
3. ಕಚೇರಿ ಪ್ರತಿ.